"ದಿನವೂ ಕಲಿಯುವುದೇ ಶಿಕ್ಷಕರ ಮುಂದಿರುವ ಸವಾಲು"

ರೇಖಾ ಚಮೋಲಿ

ಪ್ರಾಥಮಿಕ ಶಾಲೆ, ಗಣೇಶ್‌ಪುರ, ಬಟವಾಡಿ ಬ್ಲಾಕ್
ಉತ್ತರಕಾಶಿ ಜಿಲ್ಲೆ, ಉತ್ತರಾಖಂಡ್

ಗಣೇಶಪುರದ ಪ್ರಾಥಮಿಕ ಶಾಲೆ ಉತ್ತರಕಾಶಿ ಪಟ್ಟಣಕ್ಕೆ ಬಲು ಸಮೀಪದಲ್ಲಿದೆ. ಈ ಗುಡ್ಡಗಾಡು ಜಿಲ್ಲೆಯಲ್ಲಿ ಹೆಚ್ಚಿನೆಲ್ಲಾ ಪ್ರಾಥಮಿಕ ಶಾಲೆಗಳೂ ದುರ್ಗಮ ಸ್ಥಳಗಳಲ್ಲಿ ಇದ್ದರೂ ಈ ಶಾಲೆ ಮಾತ್ರ ಹೆದ್ದಾರಿಯ ಸಮೀಪದಲ್ಲೇ ಇದೆ. ಆದ್ದರಿಂದಲೇ ಶಿಕ್ಷಕರು ಸಾಮಾನ್ಯವಾಗಿ ಈ ಶಾಲೆಗೆ ತಮ್ಮನ್ನು ಹಾಕಿಸಿಕೊಳ್ಳಲು ಇಷ್ಟಪಡುತ್ತಾರೆ. ಆದರೆ ಈ ಅನುಕೂಲದ ಹಿಂದೆಯೇ ಅವರಿಗೆ ಒಂದು ಅನನುಕೂಲವೂ ಇದೆ; ಶಾಲೆಯು ರಸ್ತೆಯ ಸಮೀಪವೇ ಇರುವುದರಿಂದ ಮೇಲಧಿಕಾರಿಗಳ ಉನ್ನತ ಮಟ್ಟದ ತನಿಖೆಯ ಕಾಟ ಜಾಸ್ತಿ ಇದೆ. ಆ ಕಾರಣದಿಂದ ಈ ಶಾಲೆಯ ಉಸಾಬರಿಯೇ ಬೇಡ ಎಂಬ ಶಿಕ್ಷಕರೂ ಇದ್ದಾರೆ.

ಗಣೇಶಪುರವನ್ನು ಒಳಗೊಂಡ ಬಟವಾಡಿ ಬ್ಲಾಕ್ ವಿಶೇಷವಾಗಿ ಸಂಪದ್ಭರಿತವೇನೂ ಅಲ್ಲ. ಆದರೆ ಉತ್ತರಕಾಶಿ ಪಟ್ಟಣಕ್ಕೂ ಅಕ್ಕ ಪಕ್ಕದ ಊರುಗಳಿಗೂ ಹಾಲು ಮತ್ತು ತರಕಾರಿಯನ್ನು ಸರಬರಾಜು ಮಾಡುವ ಗಣೇಶಪುರದ ಆರ್ಥಿಕ ಸ್ಥಿತಿ ಚೆನ್ನಾಗಿಯೇ ಇದೆ. 1991ರಲ್ಲಿ ಇಲ್ಲಿ ಘಟಿಸಿದ ತೀವ್ರ ಭೂಕಂಪದಿಂದ ಅದು ಚೇತರಿಸಿಕೊಂಡಿದೆ. 2013ರ ಪ್ರವಾಹವು ಅದೃಷ್ಟವಶಾತ್ ಈ ಊರನ್ನು ಬಾಧಿಸಲಿಲ್ಲ. ಭಾಗೀರಥಿ ನದಿಯ ಉಪನದಿಯೊಂದು ವರ್ಷವಿಡಿ ಇಲ್ಲಿ ಹರಿಯುತ್ತಿದ್ದು, ಈ ಊರಿನ ಸೌಭಾಗ್ಯಕ್ಕೆ ಅದೂ ಒಂದು ಕಾರಣ ಎಂದು ಬೇರೆ ಹೇಳಬೇಕಿಲ್ಲ.

ಗಣೇಶಪುರದ ಪ್ರಾಥಮಿಕ ಶಾಲೆಯಲ್ಲಿ ಐದು ತರಗತಿಗಳು ಇದ್ದು ಒಟ್ಟು ನಲವತ್ತೊಂದು ವಿದ್ಯಾರ್ಥಿಗಳಿದ್ದಾರೆ. ಕೆಲವು ವರ್ಷಗಳ ಹಿಂದಿನ ಒಂದು ಸಣ್ಣ ಅವಧಿಯನ್ನು ಬಿಟ್ಟರೆ ಅದು ಯಾವಾಗಲೂ ಇಬ್ಬರು ಶಿಕ್ಷಕರ ಶಾಲೆಯೇ ಆಗಿತ್ತು. ಶಾಲೆಯಲ್ಲಿ ಮೂರು ತರಗತಿ ಕೊಠಡಿಗಳು, ಒಂದು ಕಛೇರಿ ಕೊಠಡಿ ಇವೆ. ಪ್ರಾರ್ಥನಾ ಸಭೆಗೂ ಮಕ್ಕಳ ಇತರೇ ಚಟುವಟಿಕೆಗಳಿಗೂ ಇನ್ನೂರು ಚದರ ಅಡಿಯ ಒಂದು ಪುಟ್ಟ ಅಂಗಳವಿದೆ. ಇಲ್ಲಿನ ಇಬ್ಬರು ಶಿಕ್ಷಕರೂ ಮಹಿಳೆಯರೇ. ಲವಲವಿಕೆ, ಆತ್ಮವಿಶ್ವಾಸ, ಅಭಿವ್ಯಕ್ತಿ ಸಾಮರ್ಥ್ಯ ಇರುವ ರೇಖಾ ಚಮೋಲಿ ಮತ್ತು ಹೆಚ್ಚು ಶಾಂತ, ಸರಳ, ಸಹೋದ್ಯೋಗಿಗೆ ಎಲ್ಲ ಬೆಂಬಲ ನೀಡಬಲ್ಲ ವ್ಯಕ್ತಿತ್ವದ ಮಂಜು ರಾಣಾ ಇಲ್ಲಿದ್ದಾರೆ.

ಶಾಲೆಯಲ್ಲಿ ನೋಂದಾಯಿತರಾದ ಮಕ್ಕಳಲ್ಲಿ ಶೇಕಡಾ 65ರಷ್ಟು ಹೆಣ್ಣುಮಕ್ಕಳಿದ್ದು, ಹುಡುಗರು ಕೇವಲ ಶೇಕಡಾ 35. ದೇಶದ ಅನೇಕ ಭಾಗಗಳಲ್ಲಿರುವಂತೆ ಇಲ್ಲಿಯೂ

ಪೋಷಕರು ಗಂಡುಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸುತ್ತಾರೆ. ಒಂದು ಖಾಸಗಿ ಶಾಲೆ ಹತ್ತಿರದಲ್ಲೇ ಇದ್ದು ಇನ್ನೆರಡು ಶಾಲೆಗಳು ಉತ್ತರಕಾಶಿ ಪಟ್ಟಣದಲ್ಲಿವೆ. ಇದಕ್ಕೆ ಪೋಷಕರು ತಿಂಗಳಿಗೆ 1,000 ರೂಪಾಯಿಗಳಿಗಿಂತಲೂ ಹೆಚ್ಚು ಶುಲ್ಕ ತೆರುತ್ತಾರೆ; ವಾಹನಕ್ಕೆ ಮಾಸಿಕ 1000 ರೂಪಾಯಿ ವೆಚ್ಚ ಬರುತ್ತದೆ. ಹೆಣ್ಣುಮಕ್ಕಳನ್ನು ಸರ್ಕಾರಿ ಶಾಲೆಗೆ ಕಳಿಸುತ್ತಾರೆ. ಮಳೆಗಾಲದ ತಿಂಗಳುಗಳಲ್ಲಿ ಮಳೆಯಿಂದಾಗಿ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿ, ಶಾಲೆಯಲ್ಲಿನ ಹಾಜರಿ 30 ವಿದ್ಯಾರ್ಥಿಗಳಿಗೆ ಅಂದರೆ ಶೇಕಡಾ 75ಕ್ಕೆ ಇಳಿಯುತ್ತದೆ. ಗಂಡುಮಕ್ಕಳ ಪರವಾಗಿ ಪೋಷಕರ ತಾರತಮ್ಯ ಧೋರಣೆಯನ್ನು ಬೊಟ್ಟುಮಾಡಿ ತೋರಿಸುತ್ತಾ ರೇಖಾ ಚಮೋಲಿ ಹೇಳುತ್ತಾರೆ, "ಮಳೆ ಹೆಚ್ಚಾದ ದಿನಗಳಲ್ಲಿ ಪೋಷಕರು ಹೆಣ್ಣುಮಕ್ಕಳನ್ನು ಬೇಕಾದರೆ ಶಾಲೆಗೆ ಕಳಿಸುತ್ತಾರೆ, ಆದರೆ ಗಂಡುಮಕ್ಕಳು ನೆನೆದು ಒದ್ದೆಯಾಗದಂತೆ ಮನೆಯಲ್ಲೇ ಬೆಚ್ಚಗೆ ಇರಿಸುತ್ತಾರೆ. ಹೆಣ್ಣುಮಕ್ಕಳು ಏಳು–ಎಂಟು ವಯಸ್ಸಿಗೇ ತಾಯಂದಿರಿಗೆ ಅಡುಗೆಯಲ್ಲಿ ನೆರವಾಗುತ್ತಾರೆ. ಆದರೆ ಗಂಡುಮಕ್ಕಳು ತಾವು ಊಟ ಮಾಡಿದ ತಟ್ಟೆಗಳನ್ನೂ ಸಹ ಎತ್ತಿಡುವುದಿಲ್ಲ. ಇದೆಲ್ಲವೂ ಬದಲಾಗಬೇಕು. ಶಾಲೆಯಲ್ಲಿ ಉತ್ತಮ ಶಿಕ್ಷಣವು ಗಂಡುಮಕ್ಕಳಲ್ಲಿ ನ್ಯಾಯ ಮತ್ತು ಸಮಾನತೆಯ ಪ್ರಜ್ಞೆಯನ್ನು ಬೆಳೆಸಬೇಕು; ಪಿತೃಪ್ರಾಧಾನ್ಯ ಪದ್ಧತಿಯಿಂದಲೂ ಪುರುಷ ಆಧಿಪತ್ಯದಿಂದಲೂ ನಮ್ಮನ್ನು ಬಿಡುಗಡೆಗೊಳಿಸಬೇಕು."

ರೇಖಾ ಚಮೋಲಿ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ರಸಾಯನಶಾಸ್ತ್ರಗಳೊಂದಿಗೆ ಬಿಎಸ್‌ಸಿ ಪದವಿಯನ್ನು ಪಡೆದು ಜೊತೆಯಲ್ಲಿ ಬಿಟಿಸಿ ಅರ್ಹತೆಯೊಂದಿಗೆ 2004ರಲ್ಲಿ ಶಿಕ್ಷಣ ಇಲಾಖೆಯನ್ನು ಸೇರಿದರು. ಆಕೆ ಗಣೇಶಪುರ ಶಾಲೆಯಲ್ಲಿ 2009ರಿಂದಲೂ ಇದ್ದಾರೆ. ಒಂದರಿಂದ ಐದನೇ ತರಗತಿವರೆಗೆ, ಎಲ್ಲಾ ವಿಷಯಗಳನ್ನು ರೇಖಾ ಮತ್ತು ಮಂಜು ತಮ್ಮಲ್ಲಿ ಹಂಚಿಕೊಂಡಿದ್ದಾರೆ. ಮಂಜು, ರೇಖಾಗಿಂತ ಐದು ವರ್ಷ ಹಿರಿಯರು; ಸೇವಾ ಹಿರಿತನದಲ್ಲಿಯೂ ಅವರೇ ಮುಂದೆ. ಆದರೆ ವಾಸ್ತವದಲ್ಲಿ ರೇಖಾ ಅವರೇ ನಾಯಕಿ. ಈ ವಿಷಯದಲ್ಲಿ ಮಂಜು ಅವರಿಗೆ ಯಾವ ತಕರಾರೂ ಇಲ್ಲ, ಬದಲಿಗೆ ಅವರು ರೇಖಾರವರನ್ನು ಪೂರ್ಣ ಮನಸ್ಸಿನಿಂದ ಬೆಂಬಲಿಸುತ್ತಾರೆ. ಗುಣಮಟ್ಟ ಮತ್ತು ಮೂಲಸೌಕರ್ಯಗಳ ಮಾನದಂಡದ ಆಧಾರದಲ್ಲಿ ಶಾಲೆಗಳ ಸ್ಥಾನ ನಿರ್ಣಯ (ರೇಟಿಂಗ್) ಮಾಡುವ ವ್ಯವಸ್ಥೆ ಉತ್ತರಾಖಂಡ್‌ನಲ್ಲಿ ಜಾರಿಯಲ್ಲಿದೆ. ಶಾಲೆಯಲ್ಲಿ ಅಗತ್ಯಕ್ಕೆ ತಕ್ಕಷ್ಟು ಕೊಠಡಿಗಳಿರುವುದರಿಂದ ಹಾಗೂ ಉಪಯೋಗದಲ್ಲಿರುವಂಥ ಶೌಚಾಲಯ ಇರುವುದರಿಂದ, ಅಂದರೆ ಮೂಲಸೌಕರ್ಯಕ್ಕೆ ಸಂಬಂಧಿಸಿದ ಎರಡು ಅಂಶಗಳು ಪೂರೈಕೆಯಾಗಿರುವುದರಿಂದ, ಈ ಶಾಲೆಗೆ ರೇಟಿಂಗ್‌ನಲ್ಲಿ 'ಎ' ಶ್ರೇಣಿ ಲಭ್ಯವಾಗಿದೆ. ಇನ್ನು ಕಲಿಕೆಗೆ ಸಂಬಂಧಿಸಿದಂತೆ ಮಾಪನ ಮಾಡಿದ ವಿಷಯಗಳಲ್ಲಿ 'ಎ' ಅಥವಾ 'ಬಿ' ಶ್ರೇಣಿ ಸಿಕ್ಕಿದೆ.

ತಮ್ಮ ಶಾಲೆಯ ಮಕ್ಕಳು ಪಠ್ಯವಿಷಯಗಳ ಕಲಿಕೆಯ ಮಟ್ಟವನ್ನೂ ಮೀರಿ ಮುಂದೆ ಸಾಗಬೇಕು ಎಂದು ರೇಖಾ ಬಯಸುತ್ತಾರೆ. ನಿಜವಾದ ಶಿಕ್ಷಣವು ಮಗುವಿನಲ್ಲಿ ಸಮಾಜದ ಎಲ್ಲ ಸದಸ್ಯರ ಬಗ್ಗೆ ಗೌರವವನ್ನು, ಆತ್ಮವಿಶ್ವಾಸ ಹಾಗೂ ಆತ್ಮಗೌರವವನ್ನು ಸೃಷ್ಟಿಸಬೇಕು ಎಂದು ರೇಖಾ ಹೇಳುತ್ತಾರೆ. ತಮ್ಮ ಶಾಲೆಯಿಂದ ತೇರ್ಗಡೆ ಹೊಂದಿದ ಪ್ರತಿಯೊಂದು

ಮಗುವಿನ ಪ್ರಗತಿಯನ್ನು ರೇಖಾ ಗಮನಿಸುತ್ತಿರುತ್ತಾರೆ. ಆ ಮಕ್ಕಳೂ ಸಹ ಅವರೊಂದಿಗೆ ಸಂಪರ್ಕ ಇರಿಸಿಕೊಂಡಿದ್ದಾರೆ. ತಮ್ಮ ಶೈಕ್ಷಣಿಕ ಪ್ರಗತಿ, ಕುಟುಂಬದ ಹಾಗೂ ಸಮಾಜದ ಆಗುಹೋಗುಗಳು ಮತ್ತಿತರ ಸಣ್ಣಪುಟ್ಟ ವಿಷಯಗಳನ್ನು ಕೂಡಾ ಅವರೊಡನೆ ಚರ್ಚಿಸುತ್ತಾರೆ. 'ಮಕ್ಕಳು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಪೋಷಕರ ಹಾಗೂ ಸಮುದಾಯದವರ ಗೌರವವನ್ನೂ ವಿಶ್ವಾಸವನ್ನೂ ಗಳಿಸಿರುವ ರೀತಿಯನ್ನು ನೋಡಿದರೆ ನನ್ನ ಮನಸ್ಸು ಹಗುರವಾಗುತ್ತದೆ. ನಮಗೆ ಪ್ರೇರಣೆ ಉಂಟಾಗುವುದು ಮೇಲಧಿಕಾರಿಗಳ ಹೊಗಳಿಕೆಯಿಂದಲೋ ಮನ್ನಣೆಯಿಂದಲೋ ಅಲ್ಲ; ಬದಲಾಗಿ ನಮ್ಮ ಕೆಲಸವನ್ನು ನೋಡಿ ಅರ್ಥಮಾಡಿಕೊಳ್ಳುವ ಜನರಿಂದ' ಅನ್ನುತ್ತಾರೆ ರೇಖಾ. ಆ ಶಾಲೆಯ ಮಕ್ಕಳು ನಮ್ಮೊಡನೆ ಮಾತನಾಡುವ ರೀತಿಯಲ್ಲಿ, ತಮಗೆ ಹೊಸದಾಗಿರುವ ಪಠ್ಯಪುಸ್ತಕವೊಂದನ್ನು ಅವರು ಓದುವ, ಬರೆಯುವ ಮತ್ತು ಅರ್ಥೈಸಿಕೊಳ್ಳುವ ವಿಧಾನದಲ್ಲಿ, ಪಠ್ಯಪುಸ್ತಕದ ಆಚೆಗಿರುವ ಅಂಕಗಣಿತದ ಸಮಸ್ಯೆಗಳನ್ನು ಕೂಡಾ ಬಿಡಿಸುವ ರೀತಿಯಲ್ಲಿ ನಮಗೆ ಆಕೆ ಹೇಳಿದ 'ಆತ್ಮವಿಶ್ವಾಸ'ಎಂದರೆ ಏನು ಎಂಬುದು ವ್ಯಕ್ತವಾಗುತ್ತದೆ.

ಚಿಂತನಶೀಲ ಕೆಲಸಗಾರರಾದ ರೇಖಾ, ತಮ್ಮ ಕೆಲಸವನ್ನು ಕುರಿತಾದ ಸಾಕಷ್ಟು ವಿವರವಾದ ದೈನಂದಿನ ಕೆಲಸಕಾರ್ಯಗಳ ಆತ್ಮಾವಲೋಕನವನ್ನು ದಿನಚರಿಯಲ್ಲಿ ದಾಖಲು ಮಾಡುತ್ತಾರೆ. "ನಿರಂತರ ಕಲಿಕೆ ಹಾಗೂ ಬೆಳವಣಿಗೆ– ಇದೇ ಶಿಕ್ಷಕರ ಮುಂದಿರುವ ಸವಾಲು. 2004ರಲ್ಲಿ ನಾನು ಎಲ್ಲಿಂದ ಹೊರಟೆ, ಆಮೇಲೆ ಐದು ವರ್ಷಗಳ ನಂತರ ಎಲ್ಲಿದ್ದೆ, ಹೇಗೆ ಅಭಿವೃದ್ಧಿ ಹೊಂದಿ ಇಲ್ಲಿಗೆ ಬಂದಿದ್ದೇನೆ ಎಂಬುದು ನೆನಪಿರಬೇಕು. ಪ್ರತಿಯೊಂದು ದಿನವೂ ಕಲಿಯಲು ಬೇಕಾದ ಶಕ್ತಿಯನ್ನು ನಾನು ಸಂಪಾದಿಸಿಕೊಳ್ಳಬೇಕು." ಇಂಥ ದೃಷ್ಟಿಕೋನ ಇರುವ ವ್ಯಕ್ತಿ ಉತ್ತರಕಾಶಿಯ ವಿವಿಧ ಶೈಕ್ಷಣಿಕ ವೇದಿಕೆಗಳಲ್ಲಿ ನಡೆಯುವ ಚರ್ಚೆಗಳು ಮತ್ತು ಕಾರ್ಯಾಗಾರಗಳಲ್ಲಿ ವೈಯಕ್ತಿಕ ಅಭಿವೃದ್ಧಿಗೆ ಅಗತ್ಯವಾದ ಅಮೂಲ್ಯ ಶಕ್ತಿಯ ಸೆಲೆಯನ್ನು ಕಂಡುಕೊಳ್ಳುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಉತ್ತರಕಾಶಿಯಲ್ಲಿ ಸಂಘಟಿತವಾಗುವ ಎಲ್ಲಾ ಶಿಕ್ಷಕ ಅಭಿವೃದ್ಧಿ ಕಾರ್ಯಾಗಾರಗಳಲ್ಲಿ ತಪ್ಪದೇ ಆಸಕ್ತಿಯಿಂದ ಭಾಗವಹಿಸುವ ರೇಖಾ, ವಿಟಿಎಫ್ ಮತ್ತು ಟಿಎಲ್‌ಸಿಗಳಲ್ಲೂ ಹಾಜರಾಗುತ್ತಾರೆ. ಅದೇ ಸಂಜೆ ನಾವು ಉತ್ತರಕಾಶಿಯಲ್ಲಿ ನಡೆದ ವಿಟಿಎಫ್ ಒಂದಕ್ಕೆ ಭೇಟಿ ನೀಡಿದೆವು. ಅಲ್ಲಿ ಸುಮಾರು ಇಪ್ಪತ್ತು ಮಂದಿ ಶಿಕ್ಷಕರು ಮಕ್ಕಳ ಭಾಷಾ ಸಾಮರ್ಥ್ಯವನ್ನು ಬೆಳೆಸುವಲ್ಲಿ ಕಾವ್ಯದ ಪಾತ್ರವೇನು ಎಂಬುದರ ಬಗ್ಗೆ ಚರ್ಚಿಸುತ್ತಿದ್ದರು. ಈ ವೇದಿಕೆಯಲ್ಲಿ ರೇಖಾ ಅವರು ಯಾವ ಹಿಂಜರಿಕೆಯೂ ಇಲ್ಲದೆ ಭಾಗವಹಿಸಿ ಅಲ್ಲಿ ಚರ್ಚಿಸುತ್ತಿದ್ದ ವಿಷಯ ಬಗ್ಗೆ ಮೌಲ್ಯಯುತವಾದ ಕೊಡುಗೆ ನೀಡಿದ್ದನ್ನು ನಾವು ಕಂಡೆವು. ರೇಖಾ ಕಾವ್ಯದಲ್ಲಿ ಗಾಢ ಆಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಕೆಲವು ವರ್ಷಗಳ ಹಿಂದೆ ಪ್ರಕಟವಾದ ಅವರ "ಪೇಡ್ ಬನೀ ಸ್ತ್ರೀ" ("ಮರವು ಹೆಣ್ಣಾಯಿತು") ಎಂಬ ಕವನ ಸಂಕಲನವು ಪುರುಷ ಪ್ರಧಾನ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣಿನ ಆತಂಕಗಳು ಹಾಗೂ ಭಾವನೆಗಳ ಕುರಿತಾಗಿಯೇ ಇವೆ. ಅವರ ಗಂಡ ಭಟ್‌ವಾರಿ ಎಂಬ ಸ್ಥಳದಲ್ಲಿ ಪಟ್ವಾರಿ ಆಗಿದ್ದಾರೆ. ಅವರು ಕರುಣಾಮಯಿಯೂ ಪ್ರಾಮಾಣಿಕರೂ ಆದ ಅಧಿಕಾರಿ ಎಂಬ ಹೆಸರು

ಗಳಿಸಿದ್ದಾರೆ. ಅವರು ಮಡದಿಯ ಎಲ್ಲ ಸಾಹಿತ್ಯಕ ಆಸಕ್ತಿಗಳಲ್ಲಿ ಸಹವರ್ತಿ ಅಲ್ಲದೇ ಇರಬಹುದು; ಆದರೆ ಈ ಅಸಾಧಾರಣ ಬಿಚ್ಚು ಮನಸ್ಸಿನ ಮತ್ತು ಬದ್ಧತೆಯುಳ್ಳ ಶಾಲಾ ಶಿಕ್ಷಕಿಗೆ ಎಲ್ಲ ಬೆಂಬಲವನ್ನೂ ನೀಡುತ್ತಿದ್ದಾರೆ.

ತಮ್ಮ ವಿಚಾರಗಳಿಗೆ ಅಭಿವ್ಯಕ್ತಿಯ ರೂಪವನ್ನು ಕೊಡುವ ಉತ್ತಮ ಸಾಮರ್ಥ್ಯ ರೇಖಾ ಅವರಲ್ಲಿದೆ. ಅವರು ಹೇಳುತ್ತಾರೆ: "ಯೋಚನಾಶಕ್ತಿ ಇರುವ ಉದ್ಯೋಗಸ್ಥ ಮಹಿಳೆಯ ಬಗ್ಗೆ ಸಮಾಜದ ದೃಷ್ಟಿಕೋನ ವಿಲಕ್ಷಣವಾದುದು. ಶಿಕ್ಷಕಿಯೊಬ್ಬಳು ಮನೆಯಲ್ಲಿ ಪುಸ್ತಕಗಳನ್ನು ಓದಿದರೆ 'ಅವಳ ಆಟಿಟ್ಯೂಡ್ ನೋಡು' ಅನ್ನುತ್ತಾರೆ. ಅವಳು ಟಿ.ವಿ. ನೋಡುತ್ತಿದ್ದರೆ, ಹೆಣಿಗೆ ಮಾಡುತ್ತಿದ್ದರೆ ಅಥವಾ ಶಾಪಿಂಗ್‌ಗೆ ಹೋದರೆ ಅದು ಮಾಮೂಲಿ ನಡವಳಿಕೆ ಅನಿಸುತ್ತದೆ. ಹೆಣ್ಣುಮಕ್ಕಳ ಮೇಲೆ ಹೇರುವ ನಿರ್ಬಂಧಗಳಿಗಿಂತಲೂ ಅವಳು ಮಾಡುವ ಪ್ರತಿಯೊಂದು ಕೆಲಸವನ್ನೂ ಕುಟುಂಬದ ಪ್ರತಿಷ್ಠೆಗೆ ತಳಕು ಹಾಕುವ ಪ್ರವೃತ್ತಿಯೇ ಹೆಚ್ಚು ದಮನಕಾರಿಯಾದುದು. ಹೆಣ್ಣುಮಕ್ಕಳ ಮೇಲೆ ಹೇರುವ ಪ್ರತಿಯೊಂದು ನಿರ್ಬಂಧದ ಮಾತು ಕೂಡಾ 'ನಾಕ್ ಕಾಟ್ ಜಾಯೆಗಿ' (ಕುಟುಂಬದ ಪ್ರತಿಷ್ಠೆ ಮಣ್ಣುಪಾಲಾದೀತು) ಎಂಬ ಹೇಳಿಕೆಯೊಡನೆ ಮುಗಿಯುತ್ತದೆ." ಕಲಿತು ಬೆಳೆಯಬೇಕು ಎಂಬ ಮಹತ್ವಾಕಾಂಕ್ಷೆ ಇರುವ ಶಿಕ್ಷಕಿಯರಿಗೆ ಅನೇಕ ಸವಾಲುಗಳು ಅನೇಕ ರೂಪಗಳಲ್ಲಿ ಎದುರಾಗುತ್ತವೆ. ತರಬೇತಿ ಶಿಬಿರಗಳಲ್ಲೂ ಕಾರ್ಯಾಗಾರಗಳಲ್ಲೂ ಪುರುಷರು ಬೇಕೆಂದಾಗ ಪಾಲ್ಗೊಳ್ಳಬಹುದು. ಆದರೆ ಶಿಕ್ಷಕಿಯರು ಮಾತ್ರ ಅಂತಹ ಪ್ರಯಾಣಕ್ಕೆ ತಿಂಗಳುಗಳ ಮೊದಲೇ ತಯಾರಿ ನಡೆಸಬೇಕು, ಕುಟುಂಬದವರನ್ನು ಒಪ್ಪಿಸಲು ಪರದಾಡಬೇಕು. ಹಲವೊಮ್ಮೆ ಶಿಕ್ಷಕಿಯರ ಕುಟುಂಬದಲ್ಲಿ ಅವರ ವೃತ್ತಿಜೀವನದ ಬಗ್ಗೆ ಗಂಡಸರಿಗೆ ಆಸಕ್ತಿ ಇರುವುದಿಲ್ಲ. ಅನೇಕ ಮಂದಿ ಶಿಕ್ಷಕಿಯರು ತಮ್ಮ ಮನೆಯ ಗಂಡಸರು ತಮ್ಮ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡಿ ಅಡ್ಡಿಪಡಿಸದಿರುವುದೇ ತಮ್ಮ ಅದೃಷ್ಟವೆಂದು ಪರಿಗಣಿಸುತ್ತಾರೆ.
